ಪ್ರಬಂಧ



**ವೆಂಕಟೇಶ ಮಾಚಕನೂರ**

ಕಲೆ: ವೆಂಕಟ್ರಮಣ ಭಟ್

# ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ

ಗಂಡ ಹೆಂಡಿರ ಜಗಳ ಕುರಿತು ಬರೆಯುವುದೆಂದರೆ ಅದು ಜೇನುಗೂಡಿಗೆ ಕೈ ಹಾಕಿದಂತೆಯೆ. ಅದು ಸಾಮಾನ್ಯ ಜೇನುಗೂಡು ಅಥವಾ ಸಾಕಿದ ಜೇನುಗೂಡು ಅಥವಾ ಕಾಡು ಜೇನುಗೂಡು ಆಗಿರಲೂಬಹುದು. ಜೇನು ಬೇಕೆಂದರೆ ಸ್ವಲ್ಪ ಕಡಿತವನ್ನು ಸಹಿಸಿಕೊಳ್ಳಬೇಕಲ್ಲವೇ. ಬಾಳು ಕೂಡ ಜೇನುಗೂಡು ಇದ್ದ ಹಾಗೆ, ಒಂದಿಷ್ಟು ಒಲವು ನಲಿವು, ಒಂದಿಷ್ಟು ಕೋಪ ತಾಪ, ಒಮ್ಮೆ ಜೇನಿನ ಸಿಹಿಯೊಂದಿಗೆ ಒಮ್ಮೆ ಜೇನ್ನೊಣ ಕಡಿತದ ಕಹಿಯೂ ಇರುತ್ತದೆ. ಇರುಸು ಮುರುಸು ಸ್ವಲ್ಪ ಹೆಚ್ಚು ಕಡಿಮೆ ಇದ್ದದ್ದೇ. ಬರೀ ಸರಸ ಅಥವಾ ಬರಿ ವಿರಸ ತುಂಬಿದ ಬಾಳು ಇರದು.

ಉತ್ತರ ಪ್ರದೇಶದ ಸಂಬಲ್ ಪಟ್ಟಣದ ಒಬ್ಬ ಮಹಿಳೆ ಜಗಳವಾಡದ, ಸದಾ ಪ್ರೀತಿಸುವ, ತಪ್ಪು ಮಾಡಿದರೂ ಬೈಯದ, ಮನೆ ಕೆಲಸದಲ್ಲಿ ನೆರವಾಗುವ ಪರಿಪೂರ್ಣ ಗಂಡನಿಂದ ಬೇಸತ್ತು ವಿಚ್ಛೇದನ ಕೋರಿ ನ್ಯಾಯಾಲಯದ ಮೆಟ್ಟಿಲು ಹತ್ತಿದ ಕುರಿತು ಇತ್ತೀಚೆಗೆ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಮದುವೆಯಾಗಿ ಹದಿನೆಂಟು ತಿಂಗಳಾದರೂ ಗಂಡ ಒಂದು ಬಾರಿಯೂ ಜಗಳವಾಡಿಲ್ಲ, ಕಿತ್ತಾಡಿಲ್ಲ ಎಂದು ಮುನಿಸಿಕೊಂಡ ಹೆಂಡತಿ, ನಿರಸ ಬಾಳುವೆಯಿಂದ ಬೇಸತ್ತು ನ್ಯಾಯಾಲಯಕ್ಕೆ ಹೋದ ಬಗ್ಗೆ ಹಾಗೂ ನ್ಯಾಯಾಲಯವು ಅವಳ ಮನವಿಯನ್ನು ಮಾನ್ಯ ಮಾಡದೇ ತಿರಸ್ಕರಿಸಿದ ಬಗ್ಗೆ ವರದಿಯಾಗಿತ್ತು. ಇದು ಅತಿಯಾದ ಪ್ರೀತಿಯಿಂದ ತ್ರಸ್ತಗೊಂಡ ಹೆಂಡತಿಯ ಪಿರ್ಯಾದು. ಗಂಡ ಹೆಂಡತಿಯರ ಮಧ್ಯ ಪ್ರೀತಿ ವಿಶ್ವಾಸದ ಕೊರತೆಯಿಂದ ಹಾಗೂ ಹಲವಾರು ಇತರೆ ಕಾರಣಗಳಿಂದ ದಿನಾಲು ವಿಚ್ಛೇದನ ಕೋರಿ ಅನೇಕ ದಂಪತಿಗಳು ವಕೀಲರ ಬಳಿ ಹೋಗುವುದು ಹಾಗೂ ಕೋರ್ಟುಗಳ ಸುತ್ತ ಸುತ್ತುತ್ತಿರುವ ಅನೇಕ ಪ್ರಸಂಗಗಳನ್ನು ನಾವು ನೋಡುತ್ತಿರುವಾಗ ಸಂಬಲ್ ನಗರದ ಮಹಿಳೆಯ ಕೋರಿಕೆ ನ್ಯಾಯಲಯಕ್ಕೂ ಅಚ್ಚರಿ ಉಂಟು ಮಾಡಿರಬಹುದು. ವಿಚ್ಛೇದನ ಕೋರಿ ಬಂದ ಪ್ರಕರಣಗಳಲ್ಲಿ ಸಾಮಾನ್ಯವಾಗಿ ನ್ಯಾಯಾಲಯಗಳು ಪತಿ ಪತ್ನಿಗೆ ಬುದ್ಧಿ ಹೇಳಿ, ಹೊಂದಾಣಿಕೆ ಮಾಡಿಕೊಂಡು ಹೋಗಿ ಎಂದು ಒಂದಿಷ್ಟು ಕಾಲಾವಕಾಶ ನೀಡುತ್ತವೆ. ಈ ಪ್ರಕರಣದಲ್ಲಿ ನ್ಯಾಯಾಲಯವು, 'ಒಂದಿಷ್ಟು ಜಗಳ ಮಾಡುತ್ತಾ ಕೂಡಿಕೊಂಡು ಹೋಗಿ, ಆಥವಾ ಆಗಾಗ ಹೆಂಡತಿಗೆ ಒಂದಿಷ್ಟು ಜೋರು ಮಾಡಿ' ಎಂದು ಗಂಡನಿಗೆ ಸಲಹೆ ನೀಡಿರಬಹುದು.

ಇಂಥ ಅಪರೂಪದ ಪ್ರಕರಣವನ್ನು ನೋಡಿ ಪತ್ನಿ ಸ್ವಲ್ಪ ಗಂಡನ ದಬ್ಬಾಳಿಕೆಯನ್ನು ಅಥವಾ ಗಂಡಾಳಿಕೆಯನ್ನು ಬಯಸುತ್ತಾಳೆ ಎಂದು ಯಾರೂ ಸಾರ್ವತ್ರಿಕವಾಗಿ ತಿಳಿಯಬಾರದು. ಗಂಡನ ದಬ್ಬಾಳಿಕೆ ಮತ್ತು ಹಿಂಸೆಯಿಂದ ಬೇಸತ್ತು ಹೆಚ್ಚಿನ